ಮೂಲ ದಾವಾ ಸಂಖ್ಯೆ 115/2016 ಪಿ ಡಬ್ಲ್ಯೂ 1 ಎಸ್ ಸಿದ್ದಪ್ಪ

(ದಿನಾಂಕ 21.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರಿದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ನಾನು ನೀರಾವರಿಗೆ ಸಂಬಂಧಪಟಂತೆ ತಹಶೀಲ್ದಾರ, ಜಿಲ್ಲಾಧಿಕಾರಿಗಳು ಬಳ್ಳಾರಿ, ನೀರಾವರಿ ಇಲಾಖೆ, ಪಿ ಎಸ್ ಐ ತಂಬ್ರಹಳ್ಳಿ ರವರಿಗೆ ಹಾಗೂ ಸಂಬಂಧಪಟ್ಟಂತಹ ಸರ್ಕಾರದ ಮಂತ್ರಿಗಳಿಗೂ ಕೂಡ ನಾನು ಅರ್ಜಿಯನ್ನು ಕೊಟ್ಟಿದ್ದೆ ಎಂದರೆ ಸರಿ. ಆ ಸಮಯದಲ್ಲಿ ತಹಶೀಲ್ದಾರ, ಗ್ರಾಮ ಲೆಕ್ಕಾಧಿಕಾರಿ ಹಾಗೂ ರೆವಿನ್ಯೂ ಇನ್ಸಪೆಕ್ಟರ್ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಸ್ಥಳಕ್ಕೆ ಬಂದಿದ್ದರೂ ಸ್ಥಳಕ್ಕೆ ಬಂದಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ರೆವಿನ್ಯೂ ಇನ್ಸಪಕ್ಟರ್ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಊರಿಗೆ ಬಂದಾಗ ಮೀನಿನ ಕೆರೆಯಲ್ಲಿ ನೀರನ್ನು ತೆಗೆದಲ್ಲಿ ಪೈಪ್ ಲೈನಗಳಿಗೆ ಯಾವುದೇ ತೊಂದರೆ ಆಗುವುದಿಲ್ಲವೆಂದು ಗ್ರಾಮಸ್ಥರು ಅವರಿಗೆ ಹೇಳಿಕೆಯನ್ನು ಕೊಟ್ಟಿರುತ್ತಾರೆಂದರೆ ಸ್ವಲ್ಪ ಜನ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ ತಹಶೀಲ್ದಾರ ಹಗರಿಬೊಮ್ಮನಹಳ್ಳಿ ಯವರಿಗೂ ಕೂಡ ಹೇಳಿಕೆಯನ್ನು ಗ್ರಾಮಸ್ಧರು ಕೊಟ್ಟಿರುತ್ತಾರೆಂದರೆ ಕೊಟ್ಟಿರಬಹುದೆಂದು ನುಡಿಯುತ್ತಾರೆ. ಗ್ರಾಮಸ್ದರು ತಹಶೀಲ್ದಾರವರಿಗೆ ಕೊಟ್ಟಂತಹ ಅರ್ಜಿಯಲ್ಲಿ ಮೀನಿನ ಕೆರೆಯಿಂದ ಅಂತರ್ಜಲ ಜಾಸ್ತಿಯಾಗಿ ನಮ್ಮ ಕೊಳವೆ ಬಾವಿಗಳಿಗೆ ತೊಂದರೆ ಆಗುತ್ತಿದೆ ಎಂದು ಬರೆದಿರುತ್ತಾರೆಂದರೆ ಬರೆದಿರಬಹುದು ಎಂದು ನುಡಿಯುತ್ತಾರೆ. ತಹಶೀಲ್ದಾರ ರವರಿಗೆ ಕೊಟ್ಟಂತಹ ಅರ್ಜಿಯಲ್ಲಿ ಇರುವಂತಹ 41 ಜನರ ಭೂಮಿಗಳು ಮೀನಿನ ಕೆರೆಯ ಅಕ್ಕ ಪಕ್ಕದಲ್ಲಿ ಬರುತ್ತವೆಂದರೆ ಸ್ವಲ್ಪ ದೂರದಲ್ಲಿ ಬರುತ್ತವೆ ಎಂದು ನುಡಿಯುತ್ತಾರೆ. ಪೈಪ್ ಲೈನ ಅಳವಡಿಕೆಗೆ ನಾನು ಅಡ್ಡಿ ಪಡಿಸಿದಾಗ 1 ನೇ ಪ್ರತಿವಾದಿಯು ತಂಬ್ರಹಳ್ಳಿ ಪೋಲೀಸ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ತಂಬ್ರಹಳ್ಳಿ ಪೋಲೀಸ ಠಾಣೆಯವರು ನನ್ನು ಕರೆಯಿಸಿ 1 ನೇ ಪ್ರತಿವಾದಿಗೆ ತೊಂದರೆ ಕೊಡಬಾರದು ಎಂದಕು ತಿಳಿಸಿದ್ದರು ಎಂದರೆ ಸಾಕ್ಷಿಯು ಕಾನೂನು ಬಾಯಿರವಾಗಿ ಪೈಪ್ ಲೈನ ನಿರ್ಮಾಣ ಮಾಡುತ್ತಿರುವುದಾಗಿ ನಾನು ಹೇಳಿಕೆಯನ್ನು ಕೊಟ್ಟಿದ್ದೆ ಎಂದು

ನುಡಿಯುತ್ತಾರೆ. ನಾನು ತಂಬ್ರಹಳ್ಳಿ ಪೋಲೀಸ ಠಾಣೆ ಯಲ್ಲಿ ಕಾನೂನಾತ್ಮವಾಗಿ ಸದರಿ ವಿಷಯವನ್ನು ಬಗೆಹರಿಸಿಕೊಳ್ಳುವುದಾಗಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಮೀನಿನ ಕೆರೆ ನಿರ್ಮಾಣವಾಗಿ ಸುಮಾರು 11- ರಿಂದ 12 ವರ್ಷಗಳು ಆಗಿರಬಹುದು ಎಂದರೆ ಸರಿ. ಮೀನಿನ ಕೆರೆ ಒಟ್ಟು 32 ಎಕರೆ ವಿಸ್ತೀರ್ಣ ದಲ್ಲಿ ಇದೆ ಎಂದರೆ ಇರಬಹುದು. ಸದರಿ ಕೆರೆಯನ್ನು ಟಿ ಬಿ ಬೋರ್ಡ ಎಸ್ಟೇಟ್ ನವರು ಅನುಮತಿಯನ್ನು ಕೊಟ್ಟ ನಂತರ ಮಾಡಲಾಗಿತ್ತು ಎಂದರೆ ಸರಿಯಲ್ಲ. ಮೊದಲು ಟಿ ಬಿ ಬೋರ್ಡ ಎಸ್ಟೇಟ್ ವತೀಯಿಂದ ಪೈಪ್ ಲೈನ ಅಳವಡಿಸಲು ಅನುಮತಿಯನ್ನು ಪಡೆಯಲಾಗಿತ್ತು ಎಂದರೆ ಸರಿ. ಆಂದ್ರ ಬ್ಯಾಂಕ್ ಬಳ್ಳಾರಿಯವರು ಎಲ್ಲಾ ದಾಖಲಾತಿಯನ್ನು ಪರಿಶೀಲಿಸಿದ ನಂತರ ಪೈಪ್ ಲೈನ್ ಅಳವಡಿಸಲು ಅವರಿಗೆ ಅನುಮತಿಯನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಮೀನುಗಾರಿಕೆ ಇಲಾಖೆಯವರು ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಸಬ್ ಸಿಡಿಯನ್ನು ಕೂಡ ನೀಡಿದ್ದರು ಎಂದರೆ ಪಡೆದುಕೊಂಡಿರಬಹುದು ನನಗೆ ಗೊತ್ತಿರುವುದಿಲ್ಲ.

2015-2016 ನೇ ಸಾಲಿಗಿಂತ ಮುಂಚೆ ಮಳೆ ಬಹಳವಾಗಿ ಕಡಿಮೆ ಆಗಿತ್ತು ಎಂದರೆ ಸರಿ. ಮೊದಲು ಟಿ ಬಿ ಬೋರ್ಡ ನಿಂದ ಪಡೆದಂತಹ ಅನುಮತಿಗೆ ನೀರು ಬರದಂತಾಯಿತು ಎಂದರೆ ಇರಬಹುದು. ಮಳೆಗಾಲದಲ್ಲಿ ಬರತಕ್ಕಂತಹ ಹಿನ್ನೀರನ್ನು ಬಳಸಿಕೊಳ್ಳಲು 2 ನೇ ಪ್ರತಿವಾದಿಯ ಕಚೇರಿಗೆ ಅರ್ಜಿಯನ್ನು ಸಲ್ಲಿಸಿ ಅನುಮತಿಯನ್ನು ಕೂಡ ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಅನುಮತಿಯನ್ನು ಪಡೆದುಕೊಂಡ ನಂತರ ರೂ 40 ಲಕ್ಷಗಳನ್ನು ಖರ್ಚು ಮಾಡಿರುತ್ತಾರೆಂದರೆ ಸಾಕ್ಷಿಯು ಬೆಳೆ ಬೆಳೆಯಲು ಅನುಮತಿಯನ್ನು ಪಡೆದುಕೊಂಡಿರುತ್ತಾರೆ ಆದರೆ ಸಿಮೆಂಟ್ ಪೈಪ್ ಲೈನ ಅಳವಡಿಸಲು ಅನುಮತಿಯನ್ನು ಪಡೆದುಕೊಂಡಿರುವುದಿಲ್ಲವೆಂದು ನುಡಿಯತ್ತಾರೆ. ಹಡಗಲಿ ಎಕ್ಸಿಕ್ಯೂಟಿವ್ ಇಂಜನೀಯರ್ ಆ ದಂತಹ 2 ನೇ ಪ್ರತಿವಾದಿ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ನಂತರ  ಸಿಮೆಂಟ್ ಪೈಪ್ ಲೈನ ಅಳವಡಿಸಲು ಅನುಮತಿಯನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ತುಂಗಾ ಭದ್ರ ಹಿನ್ನೀರಿನಿಂದ ಮೀನಿನ ಕೆರೆಯವರೆಗೂ ಪೈಪ್ ಲೈನ್ ಹಳ್ಳದಲ್ಲಿಯೇ ಬರುತ್ತದೆ ಎಂದರೆ ಹಳ್ಳದಲ್ಲಿ ಬರುತ್ತದೆ ಹಾಗೂ ಪಟ್ಟಾ

ಭೂಮಿಯಲ್ಲಿಯು ಬರುತ್ತದೆ ಎಂದು ನುಡಿಯುತ್ತಾರೆ. ನನಗೆ ಸೇರಿದಂತಹ ಸರ್ವೆ ನಂಬರ 101 ರ ಪಟ್ಟಾ ಭೂಮಿಯಲ್ಲಿ ಪೈಪ್ ಲೈನ ಬರುತ್ತದೆ. ಸರ್ವೆ ಸಂಖ್ಯೆ 101 ರಿಂದ 103 ರವರೆಗಿನ ಭೂಮಿಗಳು ಹಳ್ಳಕ್ಕೆ ಸಂಬಂಧಪಟ್ಟಂತಹ ಭೂಮಿಯಾಗಿದ್ದು ನನಗೆ ಸಂಬಂಧಪಟ್ಟಿರುವುದಿಲ್ಲವೆಂದರೆ ಸರಿಯಲ್ಲ. ಸರ್ವೆ ಸಂಖ್ಯೆ 101 ರ ಭೂಮಿಯು ನನಗೆ ಸಂಬಂಧಪಟ್ಟ ಭೂಮಿ ಆಗಿರುತ್ತದೆ ಎಂದು ನ್ಯಾಯಾಲಯಕ್ಕೆ ನಾನು ಪಹಣಿ, ಪಟ್ಟಾ ಹಾಗೂ ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ತುಂಗಾ ಭದ್ರ ನದಿ ನೀರು ಹಾಗೂ ಹಿನ್ನೀರಿನಿಂದ ಹಲವಾರು ಜನ ಅನುಮತಿಯನ್ನು ಪಡೆದುಕೊಂಡು ಬಳಸಿಕೊಳ್ಳುತ್ತಾರೆಂದರೆ ಸರಿ. ಅನಧಿಕೃತವಾಗಿಯು ಕೂಡ ಕೆಲವರು ಸದರಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ಹಲವಾರು ಜನರು 2 ನೇ ಪ್ರತಿವಾದಿ ಕಚೇರಿಯಿಂದ ನೀರನ್ನು ಉಪಯೋಗಿಸಲು ಪರವಾನಿಗೆಯನ್ನು ಪಡೆದುಕೊಂಡಿರುತ್ತಾರೆಂದರೆ ಸರಿ. ನನ್ನ ಸರ್ವೆ ಸಂಖ್ಯೆ ಜಮೀನಿನಲ್ಲಿ ಪೈಪ್ ಲೈನ್ ಹಾಕಿರುವ ಕುರಿತು ನ್ಯಾಯಾಲಯದಿಂದ ಕಮೀಷನರ ರವರನ್ನು ನೇಮಕ ಮಾಡುವುದರ ಮೂಲಕ ಪರಿಶೀಲನೆ ಮಾಡಬಹುದು ಎಂದರೆ ಸಾಕ್ಷಿಯು ಸಿಮೆಂಟ್ ಪೈಪ್ ಲೈನ ಅಧಿಕೃತವಾಗಿ ಹಾಕಲಾಗಿದೆಯೋ ಅಥವಾ ಅನಧಿಕೃತವಾಗಿ ಹಾಕಲಾಗಿದೆಯೋ ಎಂಬುದನ್ನು ಸೇರಿಸಿ ನನ್ನ ಜಮೀನಿನಲ್ಲಿ ಪೈಪ್ ಲೈನ್ ಹಾಕಿರುವ ಕುರಿತು ನ್ಯಾಯಾಲಯ ದಿಂದ ಕಮೀಷನರ ನೇಮಕ ಮಾಡಲು ತನ್ನದು ಯಾವುದು ತಕರಾರು ಇರುವುದಿಲ್ಲವೆಂದು ನುಡಿಯುತ್ತಾರೆ. ನಾನು ಮತ್ತು 3 ನೇ ವಾದಿಯು ಯಾವುದೇ ಪರವಾನಗೆಯನ್ನು ಪಡೆಯದೇ ಅನಧಿಕೃತವಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದರೆ ಸರಿಯಲ್ಲ.

ನಾನು ಕಾಂಗ್ರೇಸ್ ಪಕ್ಷದ ಮುಖಂಡ ಎಂದರೆ ಸರಿಯಲ್ಲ. ನಾನು ರಾಜಕೀಯ ಮುಖಂಡನಾದ ಕಾರಣ ಪ್ರತಿವಾದಿಗೆ ನಾನು ಅನಧಿಕೃತವಾಗಿ ತೊಂದರೆಯನ್ನು ಕೊಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಈ ಹಿಂದೆ ಗ್ರಾಮ ಪಂಚಾಯತಿ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ 115/2016                    ಪಿ ಡಬ್ಲ್ಯೂ 1 ಎಸ್ ಸಿದ್ದಪ್ಪ

ಪ್ರಶ್ನೆ 1. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದನ ಕರುಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂದು ಬರೆಯಲಾಗಿದೆ ಯಾವ ರೀತಿ ತೊದರೆ ಆಗುತ್ತಿದೆ? ಉತ್ತರ ಃ- ಕೆಲವು ಗುಂಡಿಗಳಿದ್ದು ಅದರಲ್ಲ ಇದ್ದಂತಹ ನೀರನ್ನು ದನ ಕರುಗಳು ಕುಡಿಯುತ್ತಿದ್ದವು. ಪೈಪ್ ಲೈನ್ ಆದ ನಂತರ ಅದರಿಂದ ಅವುಗಳಿಗೆ ತೊಂದರೆ ಆಗಿದೆ ಎಂದುನುಡಿಯುತ್ತಾರೆ.

ಹಿನ್ನೀರು ಜೂನ್ ನಿಂದ ಡಿಸೆಂಬರ ವರೆಗೂ ಮಾತ್ರ ಇರುತ್ತದೆ ಎಂದರೆ ದೊಡ್ಡ ಗುಂಡಿ ಇದ್ದು ವರ್ಷ ಪೂರ್ತಿ ನೀರು ಇರುತ್ತದೆ ಎಂದು ನುಡಿಯುತ್ತಾರೆ. ಹಂಪಸಾಗರ ಗ್ರಾಮ ಪಂಚಾಯತಿಯವರು ದನ ಕರುಗಳಿಗೆ ನೀರನ್ನು ಕುಡಿಯಲು ತೊಟ್ಟಿಗಳನ್ನು ಕಟ್ಟಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರಿದು ಬೆಳಗಿನ ವೇಳೆಯಲ್ಲಿ ನೀರನ್ನು ಕುಡಿಯುತ್ತವೆ ಆದರೆ ಮೇಯಲು ಹೋದ ಜಾಗದಲ್ಲಿ ಆ ಗುಂಡಿಯಲ್ಲಿ ಇದ್ದಂತಹ ನೀರೇ ಆಧಾರ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ತಹಶೀಲ್ದಾರವರಿಗೆ ಕೊಟ್ಟಂತಹ ಅರ್ಜಿಯಲ್ಲಿ ಬರೆದಿದ್ದು, ಆ ನಂತರ ಗ್ರಾಮ ಲೆಕ್ಕಿಗ ಹಾಗೂ ರೆವಿನ್ಯೂ ಇನ್ಸಪೆಕ್ಟರ್ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ ಆ ರೀತಿಯ ಯಾವುದೇ ತೊಂದರೆ ಆಗುವುದಿಲ್ಲವೆಂದು ತಿಳಿದ ನಂತರ ಪರವಾನಗೆಯನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.)

ಮರು ವಿಚಾರಣೆ - ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ